------------------------------------------------------------------------------------------------------------------------------

# ಶ್ರೀಪಾದರಾಜರು

 

## ಶ್ರೀ ಪಾ ದ ರಾ ಜ ಗು ರು ಭ್ಯೋ ನ ಮಃ

ಶ್ರೀಪೂರ್ಣಬೋಧ ಕುಲವಾರ್ಧಿ ಸುಧಾಕರಾಯ

ಶ್ರೀ ವ್ಯಾಸರಾಜ ಗುರವೇ ಯತಿಶೇಖರಾಯ

ಶ್ರೀರಂಗವಿಟ್ಠಲ ಪದಾಂಬುಜ ಬಂಭರಾಯ

ಶ್ರೀಪಾದರಾಜಗುರವೇಸ್ತು ನಮಶ್ಶುಭಾಯ

ಪೂರ್ಣಪ್ರಜ್ಞರ ವಂಶವೆಂಬ ಸಮುದ್ರಕ್ಕೆ ಚಂದ್ರನಂತಿರುವ, ವ್ಯಾಸ–ರಾಜರಿಗೂ ಗುರುಗಳಾದ, ಯತಿಚಂದ್ರಮರಾದ ಶ್ರೀರಂಗವಿಟ್ಠಲನ ಪಾದ ಕಮಲದಲ್ಲಿ ಸದಾ ನಿರತರಾದ ಶ್ರೀಪಾದರಾಜರಿಗೆ ನಮಸ್ಕಾರವು.

ಜ್ಞಾನ ವೈರಾಗ್ಯ ಭಕ್ತ್ಯಾದಿ ಕಲ್ಯಾಣಗುಣ ಶಾಲಿನಃ ।
ಲಕ್ಷ್ಮೀನಾರಾಯಣಮುನೀನ್ವಂದೇ ವಿದ್ಯಾಗುರೂನ್ಮಮ ॥

ಜ್ಞಾನ, ವೈರಾಗ್ಯ, ಭಕ್ತಿಯೇ ಮೊದಲಾದ ಮಂಗಳ ಗುಣಗಳಿಂದ ಕೂಡಿರುವ ನನ್ನ ವಿದ್ಯಾಗುರುಗಳಾದ ಲಕ್ಷ್ಮೀನಾರಾಯಣ ಮುನಿಗಳನ್ನು ವಂದಿಸುತ್ತೇನೆ.

ಕಾಲೇ ಫಲತಿ ಸುರದ್ರುಃ ಚಿಂತಾಮಣಿರಪಿ ಯಾಚನೇ ದಾತಾ ।
ವರ್ಷತಿ ಸಕಲಮಭೀಷ್ಟಂ ದರ್ಶನ ಮಾತ್ರಾತ್ ಶ್ರೀಪಾದರಾಣ್ಮುನಿಃ ॥

ಕಲ್ಪವೃಕ್ಷವು ಯೋಗ್ಯಕಾಲದಲ್ಲಿ ಮಾತ್ರ ಫಲವನ್ನು ನೀಡುತ್ತದೆ. ಚಿಂತಾಮಣಿಯು ಚಿಂತಿಸಿದರೆ ಮಾತ್ರ ಕೊಡುತ್ತದೆ. ಶ್ರೀಪಾದರಾಜರು ಕೇವಲ ದರ್ಶನ ಮಾತ್ರದಿಂದಲೆ ಎಲ್ಲ ಅಭೀಷ್ಟಗಳನ್ನು ನೆರವೇರಿಸುವರು.

**( ಆ ರಾ ಧ ನೆ : ಜೇ ಷ್ಠ ಮಾ ಸ ಶು ಕ್ಲ ಪ ಕ್ಷ ಚ ತು ರ್ದ ಶಿ )**

**ತಂದೆ – ಶೇಷಗಿರಿಯಪ್ಪ,** **ತಾಯಿ – ಗಿರಿಯಮ್ಮ**

**ವಾಸಸ್ಥಳ – ಅಬ್ಬೂರು** **ಜನನ – 1406**

**ಪೂರ್ವಾಶ್ರಮನಾಮ – ಲಕ್ಷ್ಮೀನಾರಾಯಣ**

**ಉಪನಯನ – ಸ್ವರ್ಣವರ್ಣತೀರ್ಥರ ಸಮ್ಮುಖದಲ್ಲಿ 1411 ರಲ್ಲಿ**

**ಆಶ್ರಮಗುರುಗಳು – ಶ್ರೀ ಸ್ವರ್ಣವರ್ಣತೀರ್ಥರು ( ಶ್ರೀ ಪರಶುರಾಮತೀರ್ಥರು)**

**ಶ್ರೀಮದಾಚಾರ್ಯರಿಂದ ೮ನೇ ಯತಿಗಳು**

**ಸನ್ಯಾಸ ಸ್ವೀಕಾರ – ಶ್ರೀರಂಗಂ – 1412ರಲ್ಲಿ**

**ಆಶ್ರಮನಾಮ – ಶ್ರೀಲಕ್ಷ್ಮೀನಾರಾಯಣತೀರ್ಥರು**

**ಆಶ್ರಮಶಿಷ್ಯರು – ಶ್ರೀ ಹಯಗ್ರೀವತೀರ್ಥರು**

**ವೃಂದಾವನ ಪ್ರವೇಶ =– ಕ್ರೃ.ಶ.1504, ಜ್ಯೇಷ್ಟ ಶುದ್ದ ಚತುರ್ದಶಿ**

**ಮೂಲವೃಂದಾವನ – ಮುಳುಬಾಗಿಲಿನ ನರಸಿಂಹತೀರ್ಥದ ಬಳಿ**

**ಆರಾಧ್ಯ ಉಪಾಸ್ಯಮೂರ್ತಿ – ಶ್ರೀ ಗೋಪೀನಾಥದೇವರು**

**ಇತರ ಮೂರ್ತಿಗಳು – ಶ್ರೀರಂಗವಿಠಲ, ಹಯವದನಮೂರ್ತಿ, ನರಸಿಂಹದೇವರು,**

**ರಾಮಸೀತಾಲಕ್ಷ್ಮಣರು, ಇತ್ಯಾದಿ**

**ರಂಗವಿಠಲನ ಅನುಗ್ರಹ – ಭೀಮಾನದಿತೀರದಲ್ಲಿ ಸಿಕ್ಕ ಎರಡು ಸಂಪುಟದಲ್ಲಿ**

**ಪ್ರಧಾನ ವಿದ್ಯಾಶಿಷ್ಯರು – ಶ್ರೀ ವ್ಯಾಸರಾಜರು**

**ಅಂಕಿತ – ರಂಗವಿಠಲ**

**ಗ್ರಂಥಗಳು ಸಂಸ್ಕೃತ – ವಾಗ್ವಜ್ರ**

**ಕನ್ನಡ ಗ್ರಂಥಗಳು – ಅನೇಕ ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳು, ನರಸಿಂಹದಂಡಕ, ಮಧ್ವನಾಮ, ವೇಣುಗೀತೆ, ಭ್ರಮರಗೀತೆ, ಇತ್ಯಾದಿ.**

**ಸಮಕಾಲೀನರು – ಶ್ರೀರಘುನಾಥತೀರ್ಥರು, ಶ್ರೀಬ್ರಹ್ಮಣ್ಯತೀರ್ಥರು, ಶ್ರೀವಿಭುದೇಂದ್ರತೀರ್ಥರು, ಶ್ರೀವ್ಯಾಸರಾಜರು, ಶ್ರೀ ವಿಜಯೀಂದ್ರರು, ಶ್ರೀ ವಾದಿರಾಜರು, ಶ್ರೀ ಪುರಂದರದಾಸರು, ಶ್ರೀಮಹಿಪತಿದಾಸರು, ಚಂದ್ರಗಿರಿಯ ರಾಜ ಸಾಳ್ವನರಸಿಂಹ, ಮುಮ್ಮಡಿ ವಿರೂಪಾಕ್ಷ, ಸೋಮನಾಥ ಕವಿ, ಮುಂತಾದವರು.**

**ಇತರೆ –**

**೧. ಸುಮಾರು ಕ್ರಿ.ಶ.1468ರಲ್ಲಿ ಸಾಳ್ವನರಸಿಂಹನಿಗೆ ಬಂದಿದ್ದ ಬ್ರಹ್ಮಹತ್ಯಾದೋಷವನ್ನು ನಿವಾರಣೆ ಮಾಡಿದರು**

**೨. ವಿಜಯನಗರದಲ್ಲಿ ಸಾಲ್ವ ನರಸಿಂಹ ಮಹಾರಾಜನಿಂದ ರತ್ನಾಭಿಷೇಕ**

**೩. ಶ್ರೀ ರಘುನಾಥತೀರ್ಥರಿಂದ "ಶ್ರೀಪಾದರಾಜ" ಎಂಬ ಬಿರುದು**

## ೪. ವಿದ್ಯಾಪೀಠ ಸ್ಥಾಪನೆ – ಸನ್ಯಾಸಿಗಳಿಗೆ, ಗೃಹಸ್ಥರಿಗೆ ಪಾಠ ಪ್ರವಚನಕ್ಕಾಗಿ ಮುಳಬಾಗಿಲಲ್ಲಿ ವಿದ್ಯಾಪೀಠ ಸ್ಥಾಪನೆ

ಶ್ರೀಲಕ್ಷ್ಮೀನಾರಾಯಣ ಮುನಿಗಳು **ಶ್ರೀಪಾದರಾಜರಾದರು:**

**ಒಮ್ಮೆ ಶ್ರೀಮದುತ್ತುರಾದಿಮಠದ ಪರಮಪೂಜ್ಯ ಶ್ರೀಗಳಾದ ರಘುನಾಥತೀರ್ಥರು, ಹಾಗೂ ಶ್ರೀ ವಿಭುಧೇಂದ್ರ ತೀರ್ಥ ಶ್ರೀಪಾದರೂ, ಮತ್ತು ಶ್ರೀಲಕ್ಷ್ಮೀನಾರಾಯಣತೀರ್ಥರೂ ಶ್ರೀ ಕೊಪ್ಪ ಕ್ಷೇತ್ರಕ್ಕೆ ದಯಮಾಡಿಸಿದ್ದರು. ಈ ಕ್ಷೇತ್ರದ ಸ್ವಾಮಿಯಾದ ನರಸಿಂಹದೇವರ ಅನುಗ್ರಹ ಸಂಪಾದಿಸುವ ಇಚ್ಚೆಯಿಂದ ಆ ಮೂರೂ ಮಂದಿ ಕೆಲವು ದಿನಗಳ ಮಟ್ಟಿಗೆ ಅಲ್ಲಿಯೇ ವಾಸಿಸಿದರು.**

**ಸಂಪ್ರದಾಯದಂತೆ ತಮ್ಮ ತಮ್ಮ ಶಿಷ್ಯರುಗಳಿಗೆ ಪ್ರತಿನಿತ್ಯವೂ ಶ್ರೀಮದಾಚಾರ್ಯರ ಗ್ರಂಥಗಳ ಪಾಠ ಶ್ರೀಗಳವರು ನಡೆಸುತ್ತಿದ್ದರು. ಪಾಠ ಮುಗಿದ ಮೇಲೆ ಶ್ರೀಲಕ್ಷ್ಮೀನೃಸಿಂಹನ ಸನ್ನಿಧಿಯಲ್ಲಿ ಈ ಮೂರೂ ಜನ ಶ್ರೀಪಾದಂಗಳವರೂ ಮಧ್ಯಾಹ್ನದವರೆವಿಗೂ ಅವರವರು ಪಾಠ ಹೇಳಿದ ಭಾಗದ ವಿಶೇಷ ಸಲ್ಲಾಪಗಳಲ್ಲಿ**

ತೊಡಗುತ್ತಿದ್ದರು. ಒಂದು ದಿನ ಶ್ರೀಮನ್ಯಾಯಸುಧೆಯ ಜಿಜ್ಞಾಸಾಧಿಕರಣದಲ್ಲಿ ಒಂದು ಘಟ್ಟದ ಪ್ರಸಂಗ ಒದಗಿತು. ಆ ಸಂಧರ್ಭದಲ್ಲಿ ಶ್ರೀ ವಿಭುದೇಂದ್ರತೀರ್ಥ ಶ್ರೀಪಾದಂಗಳವರು ತಮ್ಮ ಪೂರ್ವಾಶ್ರಮದಲ್ಲಿ ವಿದ್ಯಾಶಿಷ್ಯರಾದ ಶ್ರೀ ಲಕ್ಷ್ಮೀನಾರಾಯಣರನ್ನು ಕುರಿತು – "ಈ ಘಟ್ಟವನ್ನು ನೀವು ಅನುವಾದಿಸಿರಿ" ಎಂದರು. ಶ್ರೀ ಲಕ್ಷ್ಮೀನಾರಾಯಣತೀರ್ಥರ ಅನುವಾದ ಆರಂಭವಾಯಿತು. ಶ್ರೀಗಳವರ ಪೂಜೆಗಾಗಿ ಸ್ನಾನದ ವೇಳೆ ಮೀರಿತು. ಅನುವಾದ ವೈಖರಿಯ ಶ್ರವಣದಿಂದ ಮಾರುಹೋದ ವಿದ್ವತ್ ಪಕ್ಷಪಾತಿಗಳಾದ ಶ್ರೀರಘುನಾಥತೀರ್ಥ ಶ್ರೀಪಾದಂಗಳವರಿಗೆ, ಹಾಗೂ ಶ್ರೀ ವಿಭುದೇಂದ್ರತೀರ್ಥರಿಗೆ ಆದ ಆನಂದಕ್ಕೆ ಪರಿಮಿತಿ ಇಲ್ಲವಾಯಿತು.

ಅನುವಾದ ಮುಗಿದ ಮೇಲೆ ಶ್ರೀ ಲಕ್ಷ್ಮೀನಾರಾಯಣಮುನಿಗಳನ್ನು ಸಂಭೋಧಿಸಿ, ಶ್ರೀ ರಘುನಾಥತೀರ್ಥ ಶ್ರೀಪಾದಂಗಳವರು " ತಮ್ಮ ಸರಸ ಸರಳ ಮಧುರ ರೀತಿಯ ಅನುವಾದವನ್ನು ಶ್ರವಣ ಮಾಡುವ ನಿರ್ಮತ್ಸರ ಪಂಡಿತರು ತಮ್ಮ ಬಗೆಗೆ ಅವರಿಗಾಗುವ ಆನಂದವನ್ನು ವರ್ಣಿಸಲು ಬಳಸಲಿಚ್ಛಿಸುವ ಮಟ್ಟದ ಶಬ್ದಗಳನೆಲ್ಲಿ ತರಬೇಕೋ ತಿಳಿಯದಾಗಿದೆ" ಎಂದರು. ಆಗ ಶ್ರೀಲಕ್ಷ್ಮೀನಾರಾಯಣತೀರ್ಥರು "ಶ್ರೀಪಾದರ ಅಭಿಮಾನ ಸೂಚಕ ಮಾತುಗಳಿವು" ಎಂದರು. ಆಗ ಶ್ರೀ ರಘುನಾಥತೀರ್ಥ ಶ್ರೀಪಾದರು, ನಾವೆಲ್ಲ ಶ್ರೀಪಾದರಾದರೆ, ತವು "ಶ್ರೀಪಾದರಾಜರು" ಎಂದೇ

ಪ್ರಸಿದ್ಧರಾಗಿರೆಂದರು. ಇಂದಿಗೂ ಶ್ರೀಲಕ್ಷ್ಮೀನಾರಾಯಣತೀರ್ಥರನ್ನು "ಶ್ರೀಪಾದರಾಜರು" ಎಂದೇ ಪರಿಚಯಿಸಬೇಕಲ್ಲದೆ, ಶ್ರೀ ಲಕ್ಷ್ಮೀನಾರಾಯಣತೀರ್ಥರೆಂದರೆ ತಿಳಿಯುವುದು ಕಷ್ಟ.

ಶ್ರೀ ಕಾರ್ಪರ ಶ್ರೀನೃಸಿಂಹಕ್ಷೇತ್ರದಲ್ಲಿ ಒಂದು ಅಶ್ವತ್ಥ ವೃಕ್ಷವನ್ನು ನೆಟ್ಟು, ಆ ವೃಕ್ಷಕ್ಕೆ ಪುಟ್ಟದೊಂದು ಗರ್ಭಗುಡಿ ಕಟ್ಟಿಸಿ ಶ್ರೀ ಲಕ್ಷ್ಮೀನರಸಿಂಹನ ಶಿಲಾಪ್ರತಿಮೆಯನ್ನು ಪ್ರತಿಷ್ಠಿಸಿ, "ಅಶ್ವತ್ಥ ನೃಸಿಂಹಕ್ಷೇತ್ರ"ವನ್ನಾಗಿಸಿದರು. ಆ ತುಂಗಭದ್ರಾ ತರಂಗಿಣಿಯ ದಂಡೆಯಲ್ಲಿ ಸಕಲದುರಿತ ನಿವಾರಕನಾದ ಭಕ್ತರ ಸಕಲ ಮನೋಭೀಷ್ಟರಾದ ಶ್ರೀ ಅಶ್ವತ್ಥ ನೃಸಿಂಹದೇವನು ರಾರಾಜಿಸುತ್ತಿದ್ದಾನೆ.

***<u>ಬ್ರಹ್ಮಹತ್ಯಾದೋಷ ಪರಿಹಾರ –</u>*** ವಿಜಯನಗರದ ಅರಸರಿಗೆ, ಅಧೀನನಾಗಿದ್ದ ಸಾಳುವ ನರಸಿಂಹರಾಯನ ಆಳ್ವಿಕೆಯಲ್ಲಿ ಶ್ರೀ ತಿರುಪತಿಕ್ಷೇತ್ರವು ಆತನಿಗೆ ಸೇರಿದ್ದಾಗಿತ್ತು. ಶ್ರೀಶ್ರೀನಿವಾಸನ ಅರ್ಚಕರು, ವಿಜಯನಗರದ ಅರಸನ ಭೀತಿ ಇಲ್ಲದೆ, ಶ್ರೀದೇವರ ವಾಹನಾದಿಗಳನ್ನು, ತಮ್ಮ ಪರಿವಾರದವರ ಮದುವೆ – ಮುಂಜಿ ಮುಂತಾದ ಉತ್ಸವಗಳಲ್ಲಿ ಉಪಯೋಗಿಸುವುದನ್ನು ಕೇಳಿ, ಅದನ್ನು ನಿಲ್ಲಿಸಲು ಅರ್ಚಕರಿಗೆ ಎಲ್ಲ ರೀತಿಯಿಂದ ಹೇಳಿದರೂ ಅವರು ಅದನ್ನು ಧಿಕ್ಕರ ಮಾಡಿದ್ದರಿಂದ,

**ರೊಚ್ಚಿಗೆದ್ದ ಸಾಳುವ ನರಸಿಂಹನು ತಾನೇ ತಿರುಪತಿಗೆ ಧಾವಿಸಿ, ಅರ್ಚಕರ ಅತ್ಯಾಚಾರವನ್ನು ತಾನೇ ಕಂಡು, ಅವರೆಲ್ಲರನ್ನೂ ಖಡ್ಗದಿಂದ ತುಂಡರಿಸಿದನು. ತನಗೆ ಹೀಗೆ ಬಂದ ನಿಂದ್ಯವಾದ ಈ ಬ್ರಹ್ಮಹತ್ಯಾದೋಷವನ್ನು ಶ್ರೀಪಾದರಾಯರಲ್ಲಿ ಶರಣು ಬಂದು ನಿವಾರಣೆ ಮಾಡಿಕೊಂಡಿದ್ದೇ ಅಲ್ಲದೆ – ಮುಂದೆ ಶ್ರೀ ರಾಜರ ಅನುಗ್ರಹ ವಿಶೇಷದಿಂದ ವಿಜಯನಗರ ಸಿಂಹಾಸನವನ್ನೂ ಅಲಂಕರಿಸಿದನು. ಈ ಅನುಗ್ರಹ ವಿಶೇಷ ಮಾಡಿದ ಶ್ರೀಶ್ರೀಪಾದರಾಜರನ್ನು ರತ್ನಸಿಂಹಾಸನದಲ್ಲಿ ಕೂಡಿಸಿ ರತ್ನಾಭಿಷೇಕ ಮಾಡಿ ಕೃತಕೃತ್ಯನಾದನು.**

# ಶ್ರೀಪಾದರಾಜರ ಬಗ್ಗೆ ಕೀರ್ತನೆಗಳು –

***೧. ರಾಗ – ಪಂತುವರಾಳಿ : ತಾಳ – ಛಾಪುತಾಳ***

ಮಹಿಮೆ ಸಾಲದೇ ಇಷ್ಟೇ ಮಹಿಮೆ ಸಾಲದೆ ।ಪ।

ಅಹಿಶಯನನ ಒಲುಮೆಯಿಂದ
ಮಹಿಯೊಳೆಮ್ಮ ಶ್ರೀಪಾದರಾಜರ ।ಪ।

ಮುತ್ತಿನ ಕವಚ ಮೇಲ್ಕುಲಾವಿ

ರತ್ನ ಕೆತ್ತಿದ ಕರ್ಣ ಕುಂಡಲ

ಕಸ್ತೂರಿ ತಿಲಕ ಶ್ರೀಗಂಧ ಲೇಪನ

ವಿಸ್ತಾರದಿಂದ ಮೆರೆದು ಬರುವ ।೧।

ವಿಪ್ರಗೆ ಬ್ರಹ್ಮತ್ಯ ದೋಷ ಬರಲು

ಕ್ಷಿಪ್ರ ಶಂಖೋದಕದಿ ಕಳೆಯೆ

ಅಪ್ರಬುದ್ಧರು ದೂಷಿಸೆ ಗೇರೆಣ್ಣೆ

ಕಪ್ಪು ವಸನ ಹಸನ ಮಾಡಿದ ।೨।

ಹರಿಗೆ ಸಮರ್ಪಿಸಿದ ನಾನಾ

ಪರಿಯ ಶಾಖಂಗಳನು ಭುಂಜಿಸೆ

ನರರು ನಗಲು ಶ್ರೀಶಕೃಷ್ಣನ

ಕರುಣದಿಂದ ಹಸಿಯ ಮಾಡಿದ ।೩।

## ೨. ರಾಗ – ನಾಟಿ : ತಾಳ – ಅಟತಾಳ

ವಾದಿಗಜ ಮಸ್ತಕಾಂಕುಶ ಸುಜನ ಬುಧಗೇಯ

ಮೇದಿನೀಸುರ ವಂದ್ಯ ಶ್ರೀಪಾದರಾಯ ।ಪ।

ಸಕಲಶಾಸ್ತ್ರ ಕಲಾಪ ಸಂನ್ಯಾಸ ಕುಲದೀಪ ।

ಸಕಲ ಸತ್ಯಸ್ಥಾಪ ಸುಜ್ಞಾನ ದೀಪ ॥

ಪ್ರಕಟ ಪಾವನರೂಪ ಅರಿಕುಜನ ಮತಲೋಪ ।

ನಿಕಟವರ್ಜಿತಪಾಪ ಕೀರ್ತಿಪ್ರತಾಪ ।೧।

ಹರಿಪದಾಂಬುಜ ಭೃಂಗ ಪರಮತಾಹಿವಿಹಂಗ ।

ಪರಮ ಸುಗುಣಾಂತರಂಗ ಭವದುರಿತಭಂಗ ॥

ಶರಣ ಕೀರ್ತಿ ತರಂಗ ಶತ್ರುತಿಮಿರ ಪತಂಗ ।

ಶರಣು ಶುಭ ಚರಿತಾಂಗ ಷಟ್ಶಾಸ್ತ್ರಸಂಗ ।೨।

ಸಿರಿಕೃಷ್ಣ ದಿವ್ಯ ಪಾದಾಬ್ಜ ಚಿಂತಾಲೋಲ ।

ವರ ಹೇಮವರ್ಣ ಮುನಿಪತಿಯ ಸುಕುಮಾರ ॥

ಗುರುತಿಲಕ ಶ್ರೀಪಾದರಾಯ ಅಮಿತೋದ್ಧಾರ ।

ಶರಣಜನ ಸುರಧೇನು ಭಕ್ತಮಂದಾರ । ೩ ।

೩. ರಾ ಗ – ಉ ದ ಯ ರಾ ಗ : ತಾ ಳ – ತ್ರಿ ಪು ಟ ತಾ ಳ

ಶ್ರೀಪಾದರಾಯರ ದಿವ್ಯ ಶ್ರೀಪಾದವ ಭಜಿಸುವೆ । ಪ ।

ವಾಗ್ವಜ್ರಗಳಿಂದ ಮಾಯಾವಾದಿಗಳೆಲ್ಲರ ಬಾಯ

ಬೀಗವನಿಕ್ಕಿ ಮುದ್ರಿಸಿದ ಬಿಂಕಗಳ ಬಿಡಿಸುವ । ೧ ।

ವ್ಯಾಸರಾಯರಿಗೆ ವಿದ್ಯಾಭ್ಯಾಸವ ಮಾಡಿಸುವ

ದಾಸರ ನಾಮಗಳಿಂದ ಲೇಸುಲೇಸೆಂದೆನಿಸಿಕೊಂಬ । ೨ ।

ಮಧ್ವಮತದಲ್ಲಿ ಪುಟ್ಟಿ ಮಾಯಾವಾದಿಗಳ ಕುಟ್ಟಿ

ಗೆದ್ದು ಮೆರೆದನು ದಿಟ್ಟ ಗುರುರಾಯ ಜಗಜಟ್ಟಿ । ೩ ।

ಸುವರ್ಣವರ್ಣತೀರ್ಥರ ಸುತ ಶ್ರೀಪಾದರಾಯರ

ಅವರ ನಾಮಗಳಿಂದ ಕಾವನಯ್ಯ ಕರುಣಾನಿಧಿ ।೪।

ವರದ ವೇಂಕಟೇಶನ್ನ ಒಲಿದು ಪೂಜಿಸುವನ

ಕರುಣದಿಂದ ಹಯವದನ ಸಲಹೋ ಯತಿರನ್ನ ।೫।